Shikshan Sanshodhan : Journal of Arts, Humanities and Social Sciences ISSN: 2581-6241 Volume - 4, Issue - 10, Oct - 2021
Monthly, Peer-Reviewed, Refereed, Indexed Journal Impact Factor: 5.146
Received on : 29/09/2021 Accepted on : 14/10/2021 Publication Date: 31/10/2021

# ಯಜುರ್ವೇದದ ವಿಭಿನ್ನಮಜಲುಗಳ ಸಮೀಕ್ಷೆ

**Dr.Vigneshwar Bhat**
Asst. Professor, Department of languages
Amrita Vishwa Vidyapeetham, Mysuru Campus, India
Email - vigneshwarbhat@ymail.com

**ಪೀಠಿಕೆ** – "ಇಷ್ಟಪ್ರಾಪ್ತಿ ಅನಿಷ್ಟ ಪರಿಹಾರಯೋಃ ಅಲೌಕಿಕ ಉಪಾಯಂ ಯೋ ಗ್ರಂಥೋ ವೇದಯತಿ ಸ ವೇದಃ" ಎಂಬುವುದಾಗಿ. ಅಂದರೆ ಯಾವ ಗ್ರಂಥವು ಇಷ್ಟಪ್ರಾಪ್ತಿ ಮತ್ತು ಅನಿಷ್ಟನಿವೃತ್ತಿಗಳಿಗೆ ಅಲೌಕಿಕ ಉಪಾಯವನ್ನು ಬೋಧಿಸುವುದೋ ಅದೇ ವೇದ. ಈ ವೇದವು ಪ್ರಮುಖವಾಗಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಎಂಬುದಾಗಿ ವಿಭಾಗಿಸಲ್ಪಟ್ಟಿದೆ. ವೇದದ ಮೂಲತತ್ತ್ವವೇ ಧರ್ಮಪ್ರತಿಪಾದನೆಯಾಗಿದೆ. ಧರ್ಮಕ್ಕೆ ಮೂಲ ವೇದ ಎಂಬುವುದಾಗಿ ಮನ್ವಾದಿ ಸ್ಮೃತಿಕಾರರು ಉದ್ಘೋಶಿಸಿದ್ದಾರೆ. ಯಜುರ್ವೇದವು ಯಜ್ಞಪ್ರಕ್ರಿಯೆಗಳಲ್ಲಿ ಅತಿಮುಖ್ಯಸ್ಥಾನವನ್ನು ಅಲಂಕರಿಸುತ್ತದೆ. ಗದ್ಯರೂಪವಾದಂತಹ ವಚನಕ್ಕೆ `ಯಜುಸ್' ಎಂಬುವುದಾಗಿ ಪ್ರಯೋಗವು ವೇದವಾಙ್ಮಯದಲ್ಲಿ ಪ್ರಸಿದ್ಧವಾಗಿದೆ. ``ಅನಿಯತಾಕ್ಷರ ಅವಸಾನೋ ಯಜುಃ'', ``ಗದ್ಯಾತ್ಮಕೋ ಯಜುಃ'' ಎಂಬುವುದಾಗಿ ಯಜುಸ್ ಪದದ ನಿರ್ವಚನವು ಅಲ್ಲಲ್ಲಿ ಕೇಳಿಬರುತ್ತದೆ

**ಬೀಜಾಕ್ಷರ** – ವೇದ, ಯಾಗ, ಜ್ಞಾನ, ಶ್ರುತಿ, ಸುಖ, ದುಃಖ, ಶ್ರೌತ, ಸ್ಮಾರ್ತ, ತಾಂತ್ರಿಕ, ಪೌರಾಣಿಕ, ಸಾರಸ್ವತ, ಆರ್ಷೇಯ, ಅಗ್ನಿಮಂಥನ, ಕೃಷಿ, ಆಯುಷ್ಕರ್ಮ, ಕಟ್ಟಿಗೆಯನ್ನು ತಯಾರಿಸುವಿಕೆ, ಸ್ವಯಂಪಾಕ, ಗೃಹವಸ್ತುಗಳ ನಿರ್ಮಾಣ, ಕುಂಬಾರನ ಕೆಲಸ, ನೆಯ್ಗೆಯವನ ಕೆಲಸ, ಲೋಹಕಾರನ ಕಾರ್ಯ, ಹೊಲಿಗೆಯವನ ಕೌಶಲತೆ , ಪಶುಪಾಲನೆ, ರಥನಿರ್ಮಾಣ

ಭಾರತವು ವಿಶ್ವದಲ್ಲಿಯೇ ಅತಿಮುಖ್ಯವಾದ ಸ್ಥಾನವನ್ನು ಅಲಂಕರಿಸಿದೆ. ಈ ಗರಿಮೆಗೆ ಮುಖ್ಯ ಕಾರಣವೇನೆಂದು ಅನ್ವೇಷಿಸಿದಲ್ಲಿ ಭಾರತದ ಅಂತಃಸತ್ತ್ವರೂಪವಾದ ವೇದವು ಗೋಚರವಾಗುತ್ತದೆ . ಹಿಮಾಲಯದಿಂದಾರಂಭಿಸಿ ಕನ್ಯಾಕುಮಾರಿಯವರೆಗೆ ಆವರಿಸಿರುವ ಭೂಭಾಗವನ್ನು ಹಿಂದೂಸ್ಥಾನವೆಂದು ಕರೆಯುತ್ತಾರೆ ಎಂಬ ವಿಷಯ ಎಲ್ಲರಿಗೂ ತಿಳಿದದ್ದೇ ಆಗಿದೆ.

"ಹೀನಂಚ ದೂಷಯತ್ಯೇವ ಹಿಂದುರಿತ್ಯುಚ್ಯತೇ ಪ್ರಿಯೇ" ಎಂಬುವುದಾಗಿ ಮೇರುತಂತ್ರದಲ್ಲಿ ಹೇಳಲ್ಪಟ್ಟಿದೆ. ಕೆಟ್ಟ ಕಾರ್ಯಗಳನ್ನು ಕೆಟ್ಟ ಸಂಸ್ಕೃತಿಗಳನ್ನು ದೂಷಿಸುವ ಸಮುದಾಯವು ಹಿಂದೂ ಪದದಿಂದ ಕರೆಯಲ್ಪಡುತ್ತದೆ. ದುಷ್ಟ ಸಂಸ್ಕಾರಗಳನ್ನು ಖಂಡಿಸುವ ಶಕ್ತಿಯು ಶಿಷ್ಟ ಸಂಸ್ಕಾರಗಳಿಂದ ಸುಸಂಸ್ಕೃತನಾದವನಿಗೆ ಮಾತ್ರ ಸಿದ್ಧಿಸುತ್ತದೆ. ಅಂತಹ ಶಿಷ್ಟ ಸಂಸ್ಕಾರಗಳನ್ನು ಬೋಧಿಸುವುದು ವೇದವೇ ಆಗಿದೆ. ವೇದವೆಂದರೇನು ? ವೇದದಲ್ಲಿ ಎಷ್ಟು ವಿಧ ? ವೇದದ ಉಗಮ ಹೇಗೆ ? ವೇದದ ಪ್ರಯೋಜನವೇನು ? ಎಂಬ ಈ ಪ್ರಶ್ನೆಗಳು ಮನಸ್ಸಿನಾಳದಲ್ಲಿ ಮೊಳಗುತ್ತವೆ. ಕೃಷ್ಣಯಜುರ್ವೇದದ ತೈತ್ತಿರೀಯ ಸಂಹಿತೆಗೆ ಸಾಯಣರು ಬರೆದ ಭಾಷ್ಯಭೂಮಿಕೆಯಲ್ಲಿ ವೇದಪದವನ್ನು ಹೀಗೆ ವಿಸ್ತರಿಸಲಾಗಿದೆ. "ಇಷ್ಟಪ್ರಾಪ್ತಿ ಅನಿಷ್ಟ ಪರಿಹಾರಯೋಃ ಅಲೌಕಿಕ ಉಪಾಯಂ ಯೋ ಗ್ರಂಥೋ ವೇದಯತಿ ಸ ವೇದಃ" ಎಂಬುವುದಾಗಿ. ಅಂದರೆ ಯಾವ ಗ್ರಂಥವು ಇಷ್ಟಪ್ರಾಪ್ತಿ ಮತ್ತು ಅನಿಷ್ಟನಿವೃತ್ತಿಗಳಿಗೆ ಅಲೌಕಿಕ ಉಪಾಯವನ್ನು ಬೋಧಿಸುವುದೋ ಅದೇ ವೇದ. ಈ ವೇದವು ಪ್ರಮುಖವಾಗಿ ಋಗ್ವೇದ , ಯಜುರ್ವೇದ , ಸಾಮವೇದ , ಅಥರ್ವಣವೇದ ಎಂಬುದಾಗಿ ವಿಭಾಗಿಸಲ್ಪಟ್ಟಿದೆ. ವೇದದ ಮೂಲತತ್ತ್ವವೇ ಧರ್ಮಪ್ರತಿಪಾದನೆಯಾಗಿದೆ. ಧರ್ಮಕ್ಕೆ ಮೂಲ ವೇದ ಎಂಬುವುದಾಗಿ ಮನ್ವಾದಿ ಸ್ಮೃತಿಕಾರರು ಉದ್ಘೋಶಿಸಿದ್ದಾರೆ. ಯಜುರ್ವೇದವು ಯಜ್ಞಪ್ರಕ್ರಿಯೆಗಳಲ್ಲಿ ಅತಿಮುಖ್ಯಸ್ಥಾನವನ್ನು ಅಲಂಕರಿಸುತ್ತದೆ. ಗದ್ಯರೂಪವಾದಂತಹ ವಚನಕ್ಕೆ `ಯಜುಸ್' ಎಂಬುವುದಾಗಿ ಪ್ರಯೋಗವು ವೇದವಾಙ್ಮಯದಲ್ಲಿ ಪ್ರಸಿದ್ಧವಾಗಿದೆ. ``ಅನಿಯತಾಕ್ಷರ ಅವಸಾನೋ ಯಜುಃ'', `` ಗದ್ಯಾತ್ಮಕೋ ಯಜುಃ '' ಎಂಬುವುದಾಗಿ ಯಜುಸ್ ಪದದ ನಿರ್ವಚನವು ಅಲ್ಲಲ್ಲಿ ಕೇಳಿಬರುತ್ತದೆ.

ಸಾಮಾನ್ಯವಾಗಿ ಕರ್ಮವನ್ನು ನಾಲ್ಕು ವಿಭಾಗವಾಗಿ ವಿಂಗಡಿಸಬಹುದು. ಶ್ರೌತ, ಸ್ಮಾರ್ತ, ತಾಂತ್ರಿಕ, ಪೌರಾಣಿಕ ಎಂಬುವುದಾಗಿ . ಅವುಗಳಲ್ಲಿ ಮೊದಲನೆಯದು ಶ್ರೌತಕರ್ಮ ಅಂದರೆ ಶ್ರುತಿಯಲ್ಲಿ ಹೇಳಲ್ಪಟ್ಟ ಸೋಮಯಾಗ, ರಾಜಸೂಯಾದಿ ಮಹಾಯಜ್ಞಗಳು. ಇಂತಹ ಶ್ರೌತಯಜ್ಞಗಳನ್ನು ಆಚರಿಸಲು ಅನೇಕ ಪುರೋಹಿತರ ಅವಶ್ಯಕತೆ ಇರುತ್ತದೆ. ಯಜ್ಞದಲ್ಲಿ ಪ್ರಧಾನವಾಗಿ ನಾಲ್ಕು ಗಣಗಳಿರುತ್ತವೆ. ಹೋತೃಗಣ, ಅಧ್ವರ್ಯುಗಣ, ಉದ್ಗಾತೃಗಣ, ಬ್ರಹ್ಮಗಣ ಎಂಬುವುದಾಗಿ. ಯಾವ ವ್ಯಕ್ತಿಯು ಯಜುಶ್ಶಾಖೆಯವನಾಗಿರುತ್ತಾನೋ, ಯಜುರ್ವೇದಾಧ್ಯಾಯಿಯಾಗಿರುತ್ತಾನೋ ಆತನು `ಅಧ್ವರ್ಯು' ಎಂಬಪದದಿಂದ ಕರೆಯಿಸಿಕೊಳ್ಳುತ್ತಾನೆ. ಈತನು ಯಜ್ಞದಲ್ಲಿ ಅತಿಮುಖ್ಯವಾದ ಸ್ಥಾನವನ್ನು ಹೊಂದಿರುತ್ತಾನೆ.

ಕರ್ಮಾಚರಣೆಗೆ ಅಗ್ರಪ್ರಾಶಸ್ತ್ಯವನ್ನಿತ್ತ ಭಾರತೀಯರು ಯಜುರ್ವೇದವನ್ನು ಹೆಚ್ಚಾಗಿ ಅಧ್ಯಯನ ಮಾಡುವ ಪರಂಪರೆಯನ್ನು ಉಳಿಸಿಕೊಂಡುಬಂದಿರುವುದು ಸಹಜವಾಗಿದೆ. ಆದ್ದರಿಂದಲೇ ಇದರಲ್ಲಿ ಹಲವು ಶಾಖೆಗಳು ಕಂಡುಬರುತ್ತವೆ. ``ಏಕಶತಂ ಅಧ್ವರ್ಯುಶಾಖಾ " ಎಂಬುವುದಾಗಿ ಮಹಾಭಾಷ್ಯದಲ್ಲಿ ಪತಂಜಲಿಯು ನುಡಿದಿದ್ದಾನೆ. ಆದರೆ ಸಂಪ್ರತಿ ಅನೇಕಶಾಖೆಗಳು ಉಪಲಬ್ಧವಾಗುತ್ತಿಲ್ಲ. ಸಾಮಾನ್ಯವಾಗಿ ಆರು ಶಾಖೆಗಳು ಉಪಲಬ್ಧವಾಗುತ್ತಿವೆ. ಅವುಗಳೆಂದರೆ-
1) ಕಾಟಕ ಸಂಹಿತೆ
2) ಕಪಿಷ್ಠಲಕ ಸಂಹಿತೆ
3) ಮೈತ್ರಾಯಣೀಯ ಸಂಹಿತೆ
4) ತೈತ್ತಿರೀಯ ಸಂಹಿತೆ
5) ವಾಜಸನೇಯಿ ಸಂಹಿತೆಯ ಕಾಣ್ವಶಾಖೆ
6)ವಾಜಸನೇಯಿ ಸಂಹಿತೆಯ ಮಾಧ್ಯಂದಿನ ಶಾಖೆ

ಇವುಗಳಲ್ಲಿ ಮೊದಲ ನಾಲ್ಕು ಶಾಖೆಗಳಿಗೆ ಕೃಷ್ಣಯಜುರ್ವೇದವೆಂದು, ಕೊನೇಯ ಎರಡು ಶಾಖೆಗಳಿಗೆ ಶುಕ್ಲಯಜುರ್ವೇದವೆಂದು ಕರೆಯುತ್ತಾರೆ. ಕೃಷ್ಣಯಜುರ್ವೇದದಲ್ಲಿ ವಿನಿಯೋಗವಾಕ್ಯಗಳು ಹಾಗೂ ಮಂತ್ರಗಳು ಕಂಡುಬರುತ್ತವೆ. ಶುಕ್ಲಯಜುರ್ವೇದವಾದರೋ ಕೇವಲ ಮಂತ್ರಾತ್ಮಕವಾಗಿದೆ. ಯಜುರ್ವೇದ ವಿಷಯದಲ್ಲಿ ಪೌರಾಣಿಕ ಕಥೆಯೊಂದು ಪ್ರಸಿದ್ಧಿಯನ್ನು ಹೊಂದಿದೆ. ಹಿಂದೆ ತಮ್ಮ ತಪೋಬಲದಿಂದ ವೇದವನ್ನು ಆತ್ಮಸಾಕ್ಷೀಕರಿಸಿಕೊಂಡ ವ್ಯಾಸರು ವೈಶಂಪಾಯನರಿಗೆ ವೇದವನ್ನು ಅಧ್ಯಾಪಿಸುತ್ತಾರೆ . ವೈಶಂಪಾಯನರಾದರೋ ತಮ್ಮ ಶಿಷ್ಯನಾದ ಯಾಜ್ಞವಲ್ಕ್ಯನಿಗೆ ಯಜುರ್ವೇದವನ್ನು ಉಪದೇಶಿಸಿದರು. ಯಾವುದೋ ಒಂದು ಕಾರಣದಿಂದ ಕುಪಿತರಾದ ವೈಶಂಪಾಯನರು ತನ್ನಿಂದ ಅಭ್ಯಸಿಸಲ್ಪಟ್ಟಂತಹ ವೇದವನ್ನು ಪುನಃ ತನಗೊಪ್ಪಿಸಬೇಕೆಂಬುದಾಗಿ ಯಾಜ್ಞವಲ್ಕ್ಯರನ್ನು ಆಗ್ರಹಿಸುತ್ತಾರೆ. ಗುರುವಾಕ್ಯಪರಿಪಾಲನೆಗಾಗಿ ಅಭ್ಯಸಿಸಿದ ಸಮಸ್ತ ವೇದವನ್ನೂ ಯಾಜ್ಞವಲ್ಕ್ಯರು ತಮ್ಮ ಗುರುಸನ್ನಿಧಿಯಲ್ಲಿ ವಮನ (ವಾಂತಿ) ಮಾಡುತ್ತಾರೆ. ಮತ್ತುಳಿದ ವೈಶಂಪಾಯನ ಶಿಷ್ಯರು ತಿತ್ತಿರಿ (ಒಂದು ಜಾತಿಯ ಪಕ್ಷಿವಿಶೇಷ ) ಎಂಬ ಪಕ್ಷಿಯ ರೂಪವನ್ನು ತಾಳಿ ಯಾಜ್ಞವಲ್ಕ್ಯರಿಂದ ವಮಿಸಲ್ಪಟ್ಟ ವೇದವನ್ನು ಭಕ್ಷಿಸುತ್ತಾರೆ. ಭಕ್ಷಿಸಲ್ಪಟ್ಟ ಈ ವೇದವು ಮುಂದೆ `ತೈತ್ತಿರೀಯ ಶಾಖೆ' ಎಂಬುವುದಾಗಿ ಪ್ರಸಿದ್ಧಿಯನ್ನು ಹೊಂದುತ್ತದೆ. ಪುನಃ ವೇದವನ್ನು ಅಭ್ಯಸಿಸಲು ಇಚ್ಚಿತರಾದ ಯಾಜ್ಞವಲ್ಕ್ಯರು ಸೂರ್ಯನನ್ನು ಕುರಿತು ತಪಸ್ಸನ್ನಾಚರಿಸಿ ಪುನಃ ವೇದವನ್ನು ಪಡೆಯುತ್ತಾರೆ. ವೇದೋಪದೇಶದ ಸಮಯದಲ್ಲಿ ಸೂರ್ಯನು ಸ್ವತಃ `ವಾಜೀ' ಎಂಬ ದೇವತಾರೂಪದಲ್ಲಿ ಪ್ರತ್ಯಕ್ಷನಾಗಿ ಯಾಜ್ಞವಲ್ಕ್ಯರಿಗೆ ವೇದವನ್ನು ಉಪದೇಶಿಸುತ್ತಾನೆ. ಆದಕಾರಣ ಶುಕ್ಲಯಜುರ್ವೇದವು `ವಾಜಸನೀಯ ಶಾಖೆ' ಎಂಬುವುದಾಗಿ ಪ್ರಸಿದ್ಧಿಯನ್ನು ಹೊಂದಿದೆ.

ಕೃಷ್ಣಯಜುರ್ವೇದದ ತೈತ್ತಿರೀಯಶಾಖೆಯಲ್ಲಿ ಸಾರಸ್ವತ ಮತ್ತು ಆರ್ಷೇಯ ಎಂಬುವುದಾಗಿ ಎರಡು ರೀತಿಯಾದ ಅಧ್ಯಯನ ಕ್ರಮಗಳಿವೆ. ಸಾರಸ್ವತಕ್ರಮವು ಕೇವಲ ಅಧ್ಯಯನೋದ್ದೇಶದಿಂದ ವಿಭಾಗಿಸಲ್ಪಟ್ಟಿದ್ದಾಗಿದೆ. ಸಾರಸ್ವತಕ್ರಮದಲ್ಲಿ ಸಂಹಿತೆ , ಬ್ರಾಹ್ಮಣ, ಆರಣ್ಯಕ ಎಂಬುವುದಾಗಿ ಮೂರು ವಿಭಾಗವನ್ನು ಮಾಡಲಾಗಿದೆ. ಸಂಹಿತಾಭಾಗದಲ್ಲಿ ಏಳು ಕಾಂಡಗಳಿದ್ದು, ಪ್ರತಿಕಾಂಡವೂ ಅನೇಕ ಪ್ರಶ್ನಗಳೆಂಬ ಪ್ರವಿಭಾಗದಿಂದ ವಿಭಜಿಸಲ್ಪಟ್ಟಿದೆ. ಬ್ರಾಹ್ಮಣ ಭಾಗದಲ್ಲಿ ಪ್ರಮುಖವಾಗಿ ಅಷ್ಟಕಗಳೆಂಬ ಮೂರು ಅಧ್ಯಾಯಗಳಿವೆ. ಪ್ರತಿಯೊಂದು ಅಷ್ಟಕದಲ್ಲಿಯೂ ಎಂಟೆಂಟು ಉಪಾಧ್ಯಾಯಗಳಿವೆ. ಅದೇರೀತಿಯಾಗಿ ಆರಣ್ಯಕದಲ್ಲಿ ಏಳು ಅಧ್ಯಾಯಗಳಿವೆ. ಸಂಹಿತಾಭಾಗದಲ್ಲಿ ಮಂತ್ರಗಳು ಹಾಗೂ ಬ್ರಾಹ್ಮಣಗಳು ಸಂಮಿಶ್ರವಾಗಿವೆ .ಅದೇರೀತಿ ಬ್ರಾಹ್ಮಣದಲ್ಲಿಕೂಡ ಮಂತ್ರಗಳು ಹಾಗೂ ಬ್ರಾಹ್ಮಣಗಳು

**Shikshan Sanshodhan : Journal of Arts, Humanities and Social Sciences** ISSN: 2581-6241 Volume - 4, Issue - 10, Oct - 2021
Monthly, Peer-Reviewed, Refereed, Indexed Journal Impact Factor: 5.146
Received on : 29/09/2021 Accepted on : 14/10/2021 Publication Date: 31/10/2021

ಸಂಮಿಶ್ರವಾಗಿವೆ . ಈ ಎರಡು ಭಾಗಗಳು ದರ್ಶಪೂರ್ಣಮಾಸವೇ ಮೊದಲಾದ ಶ್ರೌತಯಾಗಗಳಿಗೆ ಸಂಬಂಧಿಸಿದ ವಿಷಯಗಳನ್ನು ತಿಳಿಸಿಕೊಡುತ್ತವೆ. ಕರ್ಮಾನುಷ್ಠಾನಸಮಯದಲ್ಲಿ ಉಚ್ಚರಿಸಲ್ಪಡುವ ವೇದವಾಕ್ಯಗಳು ಮಂತ್ರಗಳೆಂಬಪದದಿಂದ ವ್ಯವಹರಿಸಲ್ಪಡುತ್ತವೆ. ಕರ್ಮವನ್ನು ಹೇಗೆ ಆಚರಿಸ ಬೇಕು, ಕರ್ಮದಲ್ಲಿ ಯಾವುದು ಮುಖ್ಯ , ಕರ್ಮವನ್ನು ಯಾರು ಆಚರಿಸಬೇಕು , ಕರ್ಮಕ್ಕೆ ಎನು ಫಲ , ಕರ್ಮವನ್ನು ಯಾವ ಕಾಲದಲ್ಲಿ ಆಚರಿಸಬೇಕು ಎಂಬೀವಿಷಯಗಳನ್ನು ವಿವರಿಸುವ ವಾಕ್ಯಗಳು ಬ್ರಾಹ್ಮಣವೆಂಬ ಪದದಿಂದ ಕರಯಲ್ಪಡುತ್ತವೆ . ಆರಣ್ಯಕಭಾಗವು ಹೆಚಿನದಾಗಿ ಅಧ್ಯಾತ್ಮವಿದ್ಯೆಯನ್ನು ವಿವರಿಸುತ್ತದೆ. ಇದೇ ರೀತಿಯಾಗಿ ಆರ್ಷಪಾಠಕ್ರಮದಲ್ಲಿ ಪ್ರಾಜಾಪತ್ಯ, ಸೌಮ್ಯ, ಆಗ್ನೇಯ, ವೈಶ್ವದೇವ, ಸ್ವಾಯಂಭುವ ಎಂಬುವುದಾಗಿ ಐದು ಅಧ್ಯಾಯಗಳು ಪ್ರಸಿದ್ಧವಾಗಿವೆ. ಕರ್ಮಾನುಷ್ಠಾನವು ಆರ್ಷೇಯಪಾಠಕ್ರಮದಲ್ಲಿಯೇ ನಡೆಯುತ್ತದೆ. ತೈತ್ತಿರೀಯ ಸಂಹಿತೆ ಯಂತೆ ಮೈತ್ರಾಯಣೀಯ ಹಾಗು ಕಠಸಂಹಿತೆಗಳೂ ಗದ್ಯಪದ್ಯಾತ್ಮಕವಾಗಿವೆ . ಮೈತ್ರಾಯಣೀಯದಲ್ಲಿ ನಾಲ್ಕು ಹಾಗು ಕಠದಲ್ಲಿ ಐದು ಕಾಂಡಗಳಿವೆ . ಕಪಿಷ್ಠಲ ಸಂಹಿತೆಯ ಕೆಲವು ಭಾಗಗಳುಮಾತ್ರ ಉಪಲಬ್ಧವಿದೆ.

ಅದೇರೀತಿಯಲ್ಲಿ ಶುಕ್ಲಯಜುರ್ವೇದದಲ್ಲಿ ನಲವತ್ತು ಅಧ್ಯಾಯಗಳು ಪ್ರಸಿದ್ಧವಾಗಿವೆ. ಅವುಗಳಲ್ಲಿ ಮೊದಲನೇ ಅಧ್ಯಾಯವು ದರ್ಶಪೂರ್ಣಮಾಸಯಾಗೋಪಯೋಗಿ ಅಂಶಗಳನ್ನು ತಿಳಿಸಿಕೊಡುತ್ತದೆ. ದ್ವಿತೀಯಾಧ್ಯಾಯವು ಪಿಂಡಪಿತೃಯಜ್ಞವನ್ನು ಪ್ರಕಟೀಕರಿಸುತ್ತದೆ. ತೃತೀಯಾಧ್ಯಾಯದಲ್ಲಿ ಅಗ್ನಿಹೋತ್ರ ಸಂಬಂಧಿ ವಿಷಯಗಳು ಉಲ್ಲೇಖವಾಗಿವೆ. ನಾಲ್ಕನೇ ಅಧ್ಯಾಯದಿಂದ ಎಂಟನೆ ಅಧ್ಯಾಯ ಪರ್ಯಂತವಾಗಿ ಅಗ್ನಿಷ್ಟೋಮ ಯಾಗವು ವಿವರಿಸಲ್ಪಟ್ಟಿದೆ. ವಾಜಪೇಯ, ರಾಜಸೂಯ ಯಾಗಗಳು ಒಂಬತ್ತನೇ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿವೆ. ಹತ್ತರಲ್ಲಿ ಸೌತ್ರಾಮಣಿ ಯಾಗವು ಉಲ್ಲಿಖಿತವಾಗಿದೆ. ಹನ್ನೊಂದನೇ ಅಧ್ಯಾಯದಿಂದ ಹದಿನೆಂಟನೇ ಅಧ್ಯಾಯದವರೆಗೆ ಅಗ್ನಿಚಯನ, ಅಗ್ನ್ಯಾಧಾನ, ಗರುಡಾಕಾರವೇ ಮುಂತಾದ ಆಕಾರದಲ್ಲಿ ವೇದಿನಿರ್ಮಾಣಕ್ರಮ, ಶತರುದ್ರೀಯ ಯಾಗ , ವಸೋರ್ಧಾರಾ ಹೋಮ, ರಾಷ್ಟ್ರಭೃತ್ ಹೋಮ ಇತ್ಯಾದಿಗಳು ವಿವರಿಸಲ್ಪಟ್ಟಿವೆ. ಹತ್ತೊಂಬತ್ತನೇ ಅಧ್ಯಾಯದಿಂದ ಪರಿಶಿಷ್ಟವು ಆರಂಭಿಸಲ್ಪಡುತ್ತದೆ. ಇಪ್ಪತ್ತು, ಇಪ್ಪತ್ತೊಂದನೇ ಅಧ್ಯಾಯಗಳಲ್ಲಿ ಸೋಮ ಸಂಗ್ರಹಕ್ರಮವು ವಿಚಾರಿಸಲ್ಪಟ್ಟಿವೆ. ಇಪ್ಪತ್ತೆರಡರಿಂದ ಇಪ್ಪತ್ತೈದನೇ ಅಧ್ಯಾಯದವರೆಗೆ ಅಶ್ವಮೇಧವು ವಿವರಿಸಲ್ಪಟ್ಟಿದೆ. ತದನಂತರದ ಭಾಗಗಳಲ್ಲಿ ಪುರುಷಮೇಧ , ಸರ್ವಮೇಧ, ಪುತ್ರಮೇಧಾದಿಗಳು ವಿವರಿಸಲ್ಪಟ್ಟಿವೆ. ಅಂತಿಮಾಧ್ಯಾಯವು ಈಶಾವಾಸ್ಯೋಪನಿಷತ್ತಿನಿಂದ ಕೂಡಿದೆ. ಈ ಎಲ್ಲಾ ಅಂಶಗಳು ಕೃಷ್ಣಯಜುರ್ವೇದದಲ್ಲಿಯೂ ಕೂಡ ವಿವರಿಸಲ್ಪಟ್ಟಿವೆ.

ಪಾಶ್ಚಾತ್ಯ ಸಂಶೊಧಕರು ವೇದೋಗಮಕಾಲವನ್ನು ಸಂಶೊಧಿಸುವಕಾರ್ಯದಲ್ಲಿ ಅನೇಕ ಪ್ರಯತ್ನಗಳನ್ನು ನಡೆಸಿದ್ದಾರೆ . ಆದರೆ ಭಾರತೀಯ ಪರಂಪರೆಯಲ್ಲಿ ವೇದವು ಅಪೌರುಷೇಯವಗಿ ಪ್ರಸಿದ್ಧಿಯನ್ನು ಹೊಂದಿದೆ . ಅಂದರೆ ವೇದವು ಯವುದೋ ಒಂದು ವ್ಯಕ್ತಿಯಿಂದರಚಿಸಲ್ಪಟ್ಟಿದೆ ಎಂಬುವುದನ್ನು ಭಾರತೀಯ ದಾರ್ಶನಿಕರು ಒಪ್ಪುವುದಿಲ್ಲ . ಹೊರತಾಗಿ ವೇದವು ಋಷಿ ಮುನಿ ಗಳಿಂದ ಆತ್ಮಸಾಕ್ಷೀಕರಿಸಲ್ಪಟ್ಟಿದೆ ಎಂಬುದಾಗಿ ಭಾರತೀಯ ದಾರ್ಶನಿಕರು ಪ್ರತಿಪಾದಿಸುತ್ತಾರೆ .
ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾಸ್ವಯಂಭುವಾ |
ಶಿವಾದ್ಯಾ ಋಷಿಪರ್ಯನ್ತಾಃ ಸ್ಮರ್ತಾರೊ„ಸ್ಯ ನ ಕಾರಕಾಃ ||
ಎಂಬ ಪುರಾಣವಾಕ್ಯಗಳು ಕೂಡ ವೇದವು ನಿತ್ಯ ಹಾಗು ಅಪೌರುಷೇಯ ಎಂಬುದಾಗಿ ಸಾರುತ್ತವೆ.

ವೇದೊಕ್ತಕರ್ಮಗಳ ಅನುಷ್ಠಾನಕ್ಕಾಗಿ ಶ್ರೌತಸೂತ್ರಗಳು ಋಷಿಮುನಿಗಳಿಂದ ರಚಿಸಲ್ಪಟ್ಟಿವೆ. ಈ ಶ್ರೌತಸೂತ್ರಗಳು ಪ್ರತಿ ವೇದಗಳಿಗು ಪ್ರತ್ಯೇಕವಾಗಿಯೇ ಉಪಲಬ್ಧವಾಗುತ್ತವೆ. ಅವುಗಳಲ್ಲಿ ಕೃಷ್ಣಯಜುರ್ವೇದಕ್ಕೆ ಆಪಸ್ತಂಬ ಶ್ರೌತಸೂತ್ರ , ಬೋಧಾಯನೀಯ ಶ್ರೌತಸೂತ್ರ ಹಾಗು ಸತ್ಯಾಷಾಢೀಯ ಶ್ರೌತಸೂತ್ರಗಳು ಉಪಲಬ್ಧವಾಗಿವೆ. ಅದೇರೀತಿಯಾಗಿ ಶುಕ್ಲಯಜುರ್ವೇದಶಾಕೆUಕಾತ್ಯಾಯನ ಶ್ರೌತಸೂತ್ರವು ದೊರಕುವುದು

ವೇದವು ಕೇವಲ ಧಾರ್ಮಿಕ ಕ್ರಿಯೆಗಳಿಗಷ್ಟೇ ಉಪಯುಕ್ತವಾಗಿಲ್ಲ. ಹೊರತಾಗಿ ಅಗ್ನಿಮಂಥನ , ಕೃಷಿ , ಆಯುಷ್ಕರ್ಮ , ಕಟ್ಟಿಗೆಯನ್ನು ತಯಾರಿಸುವಿಕೆ , ಸ್ವಯಂಪಾಕ , ಗೃಹವಸ್ತುಗಳ ನಿರ್ಮಾಣ , ಕುಂಬಾರನ ಕೆಲಸ , ನೆಯ್ಗೆಯವನ ಕೆಲಸ , ಲೋಹಕಾರನ ಕಾರ್ಯ , ಹೊಲಿಗೆಯವನ ಕೌಶಲತೆ , ಪಶುಪಾಲನೆ , ರಥನಿರ್ಮಾಣ ,ಸಂಗೀತವಾದ್ಯವೇ ಮುಂತಾದ ವಿಷಯಗಳು ಸುಸ್ಪಷ್ಟವಾಗಿ ಪ್ರತಿಬಿಂಬಿಸಲ್ಪಟ್ಟಿವೆ. ಸಮಸ್ತ

Received on : 29/09/2021 Accepted on : 14/10/2021 Publication Date: 31/10/2021

ಜ್ಞಾನಾಗಾರವಾಗಿರುವ ವೇದಾಧ್ಯಯನದಿಂದ ಸುಸಂಸ್ಕೃತರಾದವರು ಇಹಪರದಲ್ಲಿಯೂ ಕೂಡ ಧರ್ಮಾನುಷ್ಠಾನಜನ್ಯವಾದ ಸುಖವನ್ನು ಹೊಂದುತ್ತಾರೆಂಬುವುದರಲ್ಲಿ ಯಾವುದೇ ಸಂದೇಹವಿಲ್ಲ.

## ಲೇಖನದಲ್ಲಿ ಆದೃತಗ್ರಂಥಗಳು:


1. **ಮನುಸ್ಮೃತಿ** - ಪಂಡಿತಪರಮೇಶ್ವರ ಭಟ್ಟಕೃತ ಸರಲಾ ಭಾಷಾಟೀಕಾ ಸಮಲಂಕೃತ, ವ್ರಜಜೀವನ ಪ್ರಾಚ್ಯಭಾರತೀ ಗ್ರಂಥಮಾಲಾ ಚೌಕಾಂಬಾ ಸಂಸ್ಕೃತ ಪ್ರತಿಷ್ಠಾನ ದೆಹಲಿ
2. **ಯಾಜ್ಞವಲ್ಕ್ಯಸ್ಮೃತಿ** - ವಿಜ್ಞಾನೇಶ್ವರ ಕೃತ ಮಿತಾಕ್ಷರ ಸಂಸ್ಕೃತ ಟೀಕಾ ತಥಾ ಡಾ|| ಗಂಗಾಸಾಗರರಾಯಕೃತ ಹಿಂದೀ ಟಿಕಾ ಸಹಿತ, ವ್ರಜಜೀವನ ಪ್ರಾಚ್ಯಭಾರತೀ ಗ್ರಂಥಮಾಲಾ ಚೌಕಾಂಬಾ ಸಂಸ್ಕೃತ ಪ್ರತಿಷ್ಠಾನ ದೆಹಲಿ
3. **ಪರಾಶರಸ್ಮೃತಿ** - ಪಂಡಿತ್ ಗುರುಪ್ರಸಾದ ಶರ್ಮಾ, ಚೌಕಾಂಬಾ ಸಂಸ್ಕೃತ ಪ್ರತಿಷ್ಠಾನ ದೆಹಲಿ
4. **ನಿರ್ಣಯಸಿಂಧು** - ಕಮಲಾಕರಭಟ್ಟ, ಸಂಪಾದಕಃ ಶ್ರೀನಾರಾಯಣ ಆಚಾರ್ಯಃ, ಚೌಕಾಂಬಾ ಸಂಸ್ಕೃತ ಪ್ರತಿಷ್ಠಾನ ವಾರಣಾಸಿ.
5. **ಧರ್ಮಸಿಂಧು** - ಸಂಪಾದಕ ಶ್ರೀ ವಾಸುದೇವಲಕ್ಷ್ಮಣ ಶಾಸ್ತ್ರೀ ಪಣಶೀಕರ, ಚೌಕಾಂಬಾ ಸಂಸ್ಕೃತ ಪ್ರತಿಷ್ಠಾನ ದೆಹಲಿ
6. **ಯೋಗೋಪನಿಷತ್** - ಸಂಪಾದಕರು ಪಂಡಿತ್ ಮಹದೇವಶಾಸ್ತ್ರೀ ದಿ ಅದ್ಯಾರ್ ಲೈಬ್ರೆರಿ ಎಂಡ್ ರಿಸೆರ್ಚಸೆಂಟರ್
7. **ಈಶಾದಿದಶೋಪನಿಷದಃ** - ಶಂಕರಭಾಷ್ಯಸಹಿತಂ ಮೊತಿಲಾಲ್ ಬನರಸಿದಾಸ್.
8. **ಮಹರ್ಷಿ ಪತಂಜಲಿಯ ಯೋಗಸೂತ್ರಗಳು** - ಸಂಸ್ಕೃತ ಮೂಲ ಕನ್ನಡ ವ್ಯಾಖ್ಯಾನಸಹಿತ, ಸ್ವಾಮಿ ಹರ್ಷಾನಂದ ರಾಮಕೃಷ್ಣಾಶ್ರಮ, ಯಾದವಗಿರಿ ಮೈಸೂರು.
9. **ಸಾಂಖ್ಯಕೋಶಃ** - ಆಚಾರ್ಯ ಕೇದಾರನಾಥ ತ್ರಿಪಾಠೀ ಸಂಸ್ಕೃತಂ ವಾರಣಾಸೀ
10. **ವಾಚಸ್ಪತ್ಯಮ್** - ವಾಚಸ್ಪ್ತಿ ಮಿಶ್ರ, ಚೌಕಾಂಬಾ ಸಂಸ್ಕೃತ ಪ್ರತಿಷ್ಠಾನ ವಾರಣಾಸಿ..
11. ಕಾತ್ಯಾಯನಶ್ರೌತಸೂತ್ರಂ- ಮಹರ್ಷೀಕಾತ್ಯಾಯನಪ್ರಣೀತ,
12. **ಶಬ್ದಕಲ್ಪದ್ರುಮ** - ರಾಜಾ ರಾಧಾಕಾನ್ತದೇವ್, ಚೌಕಾಂಬಾ ಸಂಸ್ಕೃತ ಪ್ರತಿಷ್ಠಾನ ವಾರಣಾಸಿ.




Dr. Vigneshwar Bhat currently serves as Assistant Professor in Amrita Darshanam (International Centre for Spiritual Studies), Amrita School of Arts and Sciences in Mysore campus. He obtained his M. A. in Poorvameemamsa Vidwat Uttama with gold medal in 2013 and B.A. in Poorvameemamsa Vidwat Madhyama in 2011 from Maharaja Sanskrit College Mysore. He also obtained M.A. in Sahitya Acharya from Rashtriya Sanskrit Vidyapeetha Tirupati in 2011. He is qualified in UGC National Eligibility Test (NET). He studied śauta, Smārta, Tāntrik and Paurāṇik rituals in Gurukula system. He has PhD on Karma Meemamsa at Karnataka Sanskrit University. He has a keen interest in expanding Indian traditional culture throughout the world and conducting scientific research on Indian scriptures to reveal their effectiveness. He has several books and research papers.